ನಮಗೆ ತಿಳಿದುಬರುತ್ತದೆ. ಆಗ ನಾವು ಭಾವಶೂನ್ಯರಾಗುವುದಿಲ್ಲ. ಇತರರ ಸುಖದುಃಖಗಳಿಗೆ ನಿರ್ಲಿಪ್ತವಾಗಿ ಸ್ಪಂದಿಸುತ್ತೇವೆ ಮತ್ತು ಇದು ನಮಗೆ ಸಾರ್ಥಕತೆಯ ಸಾತ್ವಿಕ ಸುಖವನ್ನು ನೀಡುತ್ತದೆ.

**ದೇಹಜೀವಿತಾದಿಷು ಅಪಿ ಅಭಿಸ್ನೇಹ ವರ್ಜಿತಃ** – "ದೇಹದ ಹುಟ್ಟು ಸಾವು ರೋಗ ಮುಂತಾದ ವಿಷಯಗಳಲ್ಲಿಯೂ ಅವನು ನಿರ್ಲಿಪ್ತನಾಗಿರುತ್ತಾನೆ." ದೇಹ ಮನಸ್ಸುಗಳಿಗೆ ಯಾವುದೇ ರೀತಿಯ ನೋವುಂಟಾಗುವುದು, ಪ್ರಕೃತಿನಿಯಮಕ್ಕೆ ಅನುಸಾರವಾಗಿ. ಪ್ರಕೃತಿವಿಕೋಪದಿಂದಾಗುವ ಕಷ್ಟಗಳಿಗಾಗಿ ನಾವು ಪ್ರಕೃತಿಯನ್ನು ದ್ವೇಷಿಸುವುದಿಲ್ಲ. ಅದಕ್ಕೆ ಬದಲಾಗಿ, ಒಬ್ಬ ವ್ಯಕ್ತಿಯಿಂದ ಉಂಟಾದ ಕಷ್ಟಕ್ಕೆ ಆ ವ್ಯಕ್ತಿಯನ್ನು ದ್ವೇಷಿಸುತ್ತೇವೆ. ಒಬ್ಬ ವ್ಯಕ್ತಿಯು ಇತರರನ್ನು ನೋಯಿಸುವುದು ತನ್ನೊಳಗಿನ ಯಾವುದೋ ಕುಂದುಕೊರತೆಗೆ ವಶನಾಗಿ. ಇಲ್ಲಿಯೂ ಪ್ರಾಕೃತಿಕ ನಿಯಮವೇ ಕೆಲಸ ಮಾಡುತ್ತದೆ. ಮನಸ್ಸು ಪ್ರಕೃತಿಗೇ ಸೇರಿರುವುದರಿಂದ ಮಾನಸಿಕ ಭಾವವಿಕಾರಗಳೂ ಪ್ರಕೃತಿಯ ನಿಯಮಾನುಸಾರವಾಗಿಯೇ ನಡೆಯುತ್ತವೆ. ಇದನ್ನು ಅರ್ಥಪೂರ್ವಕವಾಗಿ ವಿಶ್ಲೇಷಿಸಿದಾಗ ನಮ್ಮಲ್ಲಿ ದ್ವೇಷಭಾವ ಕಡಮೆಯಾಗುತ್ತದೆ.

ಸಾಧುಗಳೊಬ್ಬರು ಒಂದು ಅನಾಥಾಶ್ರಮ ನಡೆಸುತ್ತಿದ್ದರು. ಅದಕ್ಕಾಗಿ ಅವರು ಆಗಾಗ ಹಣ ಸಂಗ್ರಹಿಸಲು ಹೋಗುತ್ತಿದ್ದರು. ಒಮ್ಮೆ ಅವರು ಒಬ್ಬ ಶ್ರೀಮಂತ ವ್ಯಾಪಾರಿಯ ಹತ್ತಿರ ಹೋದರು. ಅವನು ತುಂಬ ಜಿಪುಣ. ದೇವಾಲಯಗಳಲ್ಲಿ ಕಾಣಿಕೆ ಹಾಕುತ್ತಿದ್ದನೇ ಹೊರತು ಬಡವರಿಗೆ ದಾನ ಮಾಡುತ್ತಿರಲಿಲ್ಲ. ಸಾಧುಗಳು ಬಂದಿರುವಾಗ 'ಇಲ್ಲ' ಎನ್ನಲಾಗದೆ, "ಈಗ ಸ್ವಲ್ಪ ವ್ಯಾಪಾರ ಚೆನ್ನಾಗಿಲ್ಲ, ಇನ್ನು ಆರು ತಿಂಗಳ ನಂತರ ಬನ್ನಿ" ಎಂದು ಹೇಳಿದನು. ಆರು ತಿಂಗಳ ನಂತರ ಇವರು ಖಂಡಿತ ಬರುವುದಿಲ್ಲ ಎಂಬ ಭರವಸೆಯಿಂದ ಅವನು ಹಾಗೆ ಹೇಳಿದ. ಆದರೆ ಸಾಧುಗಳು ಆರು ತಿಂಗಳ ನಂತರ ನಿರ್ದಿಷ್ಟ ದಿನದಂದು ಬಂದೇಬಿಟ್ಟರು. ವ್ಯಾಪಾರಿಗೆ ತುಂಬ ಅಸಮಾಧಾನವಾದರೂ ತೋರಿಸಿಕೊಳ್ಳದೆ, "ಈಗ ನನಗೆ ತುಂಬ ಕೆಲಸ ಇದೆ, ನಾಳೆ ಬನ್ನಿ" ಎಂದು ಹೇಳಿ ಕಳುಹಿಸಿದನು. ಈಗಲಾದರೂ ತನ್ನ ಮನಸ್ಸಿನ ಇಂಗಿತವನ್ನು ಅರ್ಥಮಾಡಿಕೊಂಡು ಅವರು ಮತ್ತೆ ಬರುವುದಿಲ್ಲ ಎಂದು ಅವನು ಭಾವಿಸಿದ್ದ. ಆದರೆ ಮರುದಿನ ಬೆಳಗ್ಗೆ ಸಾಧುಗಳು ಮತ್ತೆ ಹಾಜರ್. ಈಗ ವ್ಯಾಪಾರಿಗೆ ತುಂಬ ಕೋಪ ಬಂದು, "ಈಗ ನನಗೆ ಸಮಯವಿಲ್ಲ, ಹೋಗಿ, ಹೊರಗಡೆ ನಿಂತುಕೊಂಡಿರಿ" ಎಂದು ಗದರಿಸಿದನು. ಸಾಧುಗಳು ಸಮಾಧಾನದಿಂದ ಹೊರಗಡೆ ಬಂದು ಕಾಯುತ್ತ ನಿಂತಿದ್ದರು. ವ್ಯಾಪಾರಿಯ ನಿರೀಕ್ಷೆಯಂತೆ ಅವರು ಹೊರಟುಹೋಗಲೇ ಇಲ್ಲ. ಸಂಜೆ ಅಂಗಡಿ ಮುಚ್ಚಿ ಹೊರಗೆ ಬರುವಾಗ ಸಾಧುಗಳು ಹಾಗೇ ನಿಂತಿದ್ದರು, "ನಮ್ಮ ಅನಾಥಾಶ್ರಮಕ್ಕೆ ಹಣ ಕೊಡಿ" ಎಂದು ಕೈ ಚಾಚಿದರು. ಈಗ ವ್ಯಾಪಾರಿಗೆ ಕೋಪ ತಡೆಯಲಾಗಲಿಲ್ಲ. ಸಾಧುಗಳನ್ನು ಬಾಯಿಗೆ ಬಂದಂತೆ ಬಯ್ಯುತ್ತ ಅವರ ಮುಖದ ಮೇಲೆ ಉಗುಳಿದನು. ಸಾಧುಗಳು ಸ್ವಲ್ಪವೂ ಅಸಮಾಧಾನಗೊಳ್ಳದೇ, ಮುಖದ ಮೇಲಿನ ಉಗುಳನ್ನು ಒರೆಸಿಕೊಳ್ಳುತ್ತ, "ಇದನ್ನು ನೀವು ನೀಡಿರುವದು ನನಗೆ; ಈಗ ಅನಾಥಾಶ್ರಮಕ್ಕೆ ಏನಾದರೂ ಕೊಡಿ" ಎಂದು ಕೈಚಾಚಿದರು. ಇದು **'ಸರ್ವತ್ರ ಅನಭಿಸ್ನೇಹ'** (ಯಾವುದಕ್ಕೂ ಅಂಟಿಕೊಳ್ಳದೇ ಇರುವುದು) ಭಾವದಿಂದ ಉಂಟಾಗುವ ಸ್ಥಿತಿ.

ನಿರ್ಲಿಪ್ತತೆ ಇಲ್ಲದಿದ್ದರೆ ನಾವು ಇಂದ್ರಿಯವಿಷಯಗಳಿಗೆ ಬಲಿಯಾಗುತ್ತೇವೆ. ನೊಣವು ಹಲಸಿನ ಹಣ್ಣನ್ನು ತಿನ್ನಲು ಹೋಗಿ ಅದರ ಮೇಣಕ್ಕೆ ಅಂಟಿಕೊಂಡು ಸತ್ತುಹೋಗುತ್ತದೆ. ಕೀಟಾಹಾರಸಸ್ಯದ ಮಕರಂದವನ್ನು ಹೀರಲು ಹೋಗಿ ಕೀಟವು ಆ ಸಸ್ಯಕ್ಕೆ ಬಲಿಯಾಗುತ್ತದೆ. ಹಾಗೆಯೇ ನಾವೂ ಇಂದ್ರಿಯವಿಷಯಗಳನ್ನು ಭೋಗಿಸಲು ಹೋಗಿ ಅವುಗಳಿಗೆ ಭೋಗ್ಯರಾಗುತ್ತೇವೆ ಅಂದರೆ ಅವುಗಳಿಗೆ ಬಲಿಯಾಗುತ್ತೇವೆ. ಸ್ವಾಮಿ ವಿವೇಕಾನಂದರು ಇದನ್ನು ನಮ್ಮ ಹೃದಯಕ್ಕೆ ತಾಕುವಂತೆ ಹೀಗೆ ಹೇಳುತ್ತಾರೆ: "ನಾವು ಮಧುವನ್ನು ಕುಡಿಯಲು ಬಂದೆವು. ಆದರೆ ನಮ್ಮ ಕೈಕಾಲುಗಳು ಅದರಲ್ಲಿ ಸಿಕ್ಕಿಕೊಂಡಿರುವುದನ್ನು ನೋಡುತ್ತೇವೆ. ನಾವು ಆನಂದವನ್ನು ಅನುಭವಿಸುವುದಕ್ಕೆ ಬಂದೆವು. ಆದರೆ ಮತ್ತಾರೋ ನಮ್ಮಿಂದ ಆನಂದವನ್ನು ಅನುಭವಿಸುತ್ತಿರುವರು. ನಾವು ಆಳುವುದಕ್ಕೆ ಬಂದೆವು, ಆದರೆ ಮತ್ತಾರೋ ನಮ್ಮನ್ನು ಆಳುತ್ತಿರುವರು. ನಾವು ಕೆಲಸ ಮಾಡುವುದಕ್ಕೆ ಬಂದೆವು, ಆದರೆ ಮತ್ತಾರೋ ನಮ್ಮಿಂದ ಅದನ್ನು ಮಾಡಿಸುತ್ತಿರುವರು... ಪ್ರಕೃತಿಯಿಂದ ಎಲ್ಲವನ್ನೂ ಪಡೆಯಬಯಸುತ್ತೇವೆ, ಆದರೆ ಪ್ರಕೃತಿ ಎಲ್ಲವನ್ನೂ ಅಪಹರಿಸಿ, ನಮ್ಮನ್ನು ಸುಲಿದು ಆಚೆಗೆ ಎಸೆಯುವುದು" (ಕೃತಿಶ್ರೇಣಿ, ೬ : ೨೪೩).


ಭರ್ತೃಹರಿಯ ಒಂದು ಪ್ರಸಿದ್ಧ ಶ್ಲೋಕವನ್ನು ನಾವಿಲ್ಲಿ ನೆನೆಸಿಕೊಳ್ಳಬಹುದು.

**ಭೋಗಾ ನ ಭುಕ್ತಾ ವಯಮೇವ ಭುಕ್ತಾಃ**
**ತಪೋ ನ ತಪ್ತಂ ವಯಮೇವ ತಪ್ತಾಃ ।**
**ಕಾಲೋ ನ ಯಾತೋ ವಯಮೇವ ಯಾತಾಃ**
**ತೃಷ್ಣಾ ನ ಜೀರ್ಣಾ ವಯಮೇವ ಜೀರ್ಣಾಃ ॥**

(*ವೈರಾಗ್ಯ ಶತಕ*, ೧ : ೭)

"ಭೋಗವನ್ನು ಭೋಗಿಸಲಿಲ್ಲ, ನಾವೇ ಭೋಗಿಸಲ್ಪಟ್ಟೆವು. ತಪಸ್ಸು ಮಾಡಲಿಲ್ಲ, ನಾವೇ ತಪಿಸಲ್ಪಟ್ಟೆವು. ಕಾಲ ಕಳೆದು ಹೋಗಲಿಲ್ಲ, ಅದಕ್ಕೆ ಬದಲಾಗಿ ನಾವೇ ಕಳೆಯಲ್ಪಟ್ಟೆವು. ಆಸೆಗಳು ಜೀರ್ಣವಾಗಲಿಲ್ಲ, ನಾವೇ ಜೀರ್ಣಿಸಲ್ಪಟ್ಟೆವು."

*(ಮುಂದುವರಿಯುವುದು)*



# ಕೈಲಾಸ ಮಾನಸ ಸರೋವರ : ನಿಸರ್ಗದ ಸ್ವರ್ಗೀಯ ನೋಟ


ಸ್ವಾಮಿ ಗೌರಾಂಗಾನಂದ

ಅನುವಾದ:
ಡಾ. ರಮಾ ಬೆಣ್ಣೂರ್


(ಹಿಂದಿನ ಸಂಚಿಕೆಯಿಂದ)

**ಬುಧಿ ಕ್ಯಾಂಪ್:** ದೀರ್ಘ ನಡಿಗೆಯ ನಂತರ ನಾವು ಮಲ್ಪಾವನ್ನು ತಲುಪಿದೆವು. ಕಾಳಿ ನದಿಯ ದಡದ ಮೇಲಿರುವ ಇದನ್ನು ೧೯೯೮ರಲ್ಲಿ ಜರುಗಿದ ಭೂಕುಸಿತವು ನಾಶಮಾಡಿಬಿಟ್ಟಿದೆ. ಅದಕ್ಕೆ ಮೊದಲು ಇದೂ ಸಹ ಯಾತ್ರಿಕರ ಒಂದು ತಂಗುದಾಣವಾಗಿತ್ತು. ಯಾತ್ರಿಗಳು ಮಲಗಿದ್ದಾಗ ಭಾರೀ ಮಳೆ ಬಿದ್ದು, ಅದು ಹಿಮಪಾತಕ್ಕೆ ಕಾರಣವಾಗಿ, ಸುರಿದ ಭಗ್ನಾವಶೇಷದಡಿ ತಂಗಿದ್ದ ಎಲ್ಲ ಯಾತ್ರಿಕರೂ ಅದಕ್ಕೆ ಸಿಕ್ಕು ಮೃತರಾದರು. ಖ್ಯಾತ ನೃತ್ಯಪಟು ಪ್ರತಿಮಾ ಬೇಡಿಯೂ ಈ ಗುಂಪಿನಲ್ಲಿ ಇದ್ದರು. ಈ ಸಂದರ್ಭದಲ್ಲಿ ಇಡೀ ಮಲ್ಪಾ ಹಳ್ಳಿಯು ಹೇಳಹೆಸರಿಲ್ಲದಂತೆ ನಿರ್ನಾಮವಾಯಿತು.

ಈ ದುರ್ಘಟನೆಯ ನಂತರ ಕ್ಯಾಂಪನ್ನು ಬುಧಿ ಎಂಬ ಸ್ಥಳಕ್ಕೆ ಬದಲಾಯಿಸಲಾಯಿತು. ಬುಧಿಗೆ ಹೋಗುವ ಹಾದಿಯಲ್ಲಿ ಎತ್ತರದ ಜಾಗದಲ್ಲಿ ಹರಡಿರುವ ಗದ್ದೆಗಳು ಎದುರಾಗುತ್ತವೆ. ಆ ಗದ್ದೆಗಳಲ್ಲಿ ಮೆಕ್ಕೆಜೋಳ, ಕುದುರೆಗಳಿಗೆ ಮೇವಾಗಿ ಉಪಯೋಗಿಸುವ ಧಾನ್ಯವಾದ ಚೌಲಾಯಿ ಮುಂತಾದ ಬೆಳೆಗಳನ್ನು ಇಲ್ಲಿಯ ಜನ ಬೆಳೆಯುತ್ತಾರೆ. ಅಗಲವಾದ ಎಲೆಗಳುಳ್ಳ ಮರಗಳ ನಡುವೆ ಹಾಯ್ದು ಮೇಲೇರಿ ನಾವು ಬುಧಿಯನ್ನು ತಲಪುತ್ತೇವೆ; ಕಡೆಗೆ ಹತ್ತು ಘಂಟೆಗಳ ಕಾಲ್ನಡಿಗೆಯ ನಂತರ ಕ್ಯಾಂಪನ್ನು ಸೇರುತ್ತೇವೆ. ಬಿಸಿಯಾದ ಆಲೂ ಪರೋಟ ಮತ್ತು ಪಲ್ಯ ನಮಗಾಗಿ ತಯಾರಾಗಿರುತ್ತದೆ. ಬುಧಿಯ ರಮ್ಯತಾಣದಲ್ಲಿ ಹೂವುಗಳ ಹಾಸಿಗೆಯ ಮೇಲೆ ಸುವ್ಯವಸ್ಥಿತ ಬಣ್ಣಗಳ ಸರಣಿಯಲ್ಲಿ ಹಾರಾಡುತ್ತಿರುವ ಚಿಟ್ಟೆಗಳು ಹಾಗೂ ದುಂಬಿಗಳ ದಂಡನ್ನು ನಾವು ಕಾಣಬಹುದು. ಪ್ರಕೃತಿಯ ಈ ಉದಾರವಾದ, ಸಮೃದ್ಧಿಯಾದ ವೈಭವವನ್ನು ನೋಡಿ ಯಾತ್ರಿಕರಲ್ಲಿ ಸಂತೃಪ್ತ ಭಾವನೆಯುಂಟಾಗುತ್ತದೆ.

ರಾಜಗಾಂಭೀರ್ಯದ ನೋಟವನ್ನು ಬೀರುತ್ತಿರುವ ಹಿಮಾಚ್ಛಾದಿತ ಪರ್ವತಶಿಖರಗಳ ತುದಿ ಕಾಣಿಸಲು ಆರಂಭ ವಾಗುವುದು ಇಲ್ಲಿಂದಲೇ. ಅವುಗಳ ಪ್ರಥಮ ದರ್ಶನ ಯಾತ್ರಿಕರಿಗೆ ಈ ಸ್ಥಳದಲ್ಲಿಯೇ ಆಗುತ್ತದೆ. ಮುಂದೆ ಮುಂದೆ ಹೋದಂತೆ, ಭಗವಂತನ ಸೃಷ್ಟಿಯ ಅಗಾಧ ಕರುಣೆಯು ತಮ್ಮ ಹಾದಿಯುದ್ದಕ್ಕೂ ದೊರಕುತ್ತಿರುವುದನ್ನು ಮನಗಾಣುತ್ತಾ ಯಾತ್ರಿಕರು ಮುಂದುವರೆಯುತ್ತಾರೆ. ಆಗ ಮಾತು ಮೌನವಾಗಿ ಪರಿಣಮಿಸುತ್ತದೆ.

**ಛಿಯಾ ಲೇಕ್ (ಹೂವುಗಳ ಕಣಿವೆ):** ಸುಮಾರು ೩ ಕಿಲೊಮೀಟರ್ ಅಥವಾ ೨,೦೦೦ ಅಡಿಗಳಷ್ಟು ನಡಿಗೆಯ ನಂತರ ಸುಂದರವಾದ ಛಿಯಾ ಲೇಕ್ ಕಣಿವೆಗೆ ಬಂದು ಸೇರುತ್ತೇವೆ. ಇದರ ಎತ್ತರ ಸಮುದ್ರಮಟ್ಟದಿಂದ ಸುಮಾರು ೧೦,೦೦೦ ಅಡಿ. ಹಚ್ಚಹಸುರಿನ ಹುಲ್ಲುಹಾಸು ಮತ್ತು ನಾನಾ ರೀತಿಯ ಕಾಡು ಹೂವುಗಳು ಈ ಕಣಿವೆಯನ್ನು ಅಲಂಕರಿಸಿವೆ. ಇದನ್ನು 'ಕುಮಾವೂ ಹೂವುಗಳ ಕಣಿವೆ' ಎಂದೇ ಕರೆಯುತ್ತಾರೆ. ಎಷ್ಟೋ ಕಾಲದಿಂದಲೂ ಈ ಕಣಿವೆ ಇರುವುದು ಜನರಿಗೆ ತಿಳಿದಿದೆ. ಆದರೂ

ಗರ್ವಾಲ್ ಪ್ರದೇಶದಲ್ಲಿ ಫ್ರಾಂಕ್ ಸ್ಮಿತ್ ಎಂಬುವವನಿಂದ ೧೯೩೧ರಲ್ಲಿ ಕಂಡುಹಿಡಿದ ಪುಷ್ಪಗಳ ಕಣಿವೆಯ ಹಾಗೆ ಇದು ಹೆಸರುವಾಸಿಯಾಗಿಲ್ಲ. 'ಹೂವಿನ ಕಣಿವೆ'ಯು ನೈಸರ್ಗಿಕ ಜಗತ್ತಿನ ಸಹಜ ವಿಸ್ಮಯಗಳಲ್ಲೊಂದು. ಇತ್ತೀಚೆಗೆ ಇದು ಜಾಗತಿಕ ಸ್ಮಾರಕಗಳ ಪಟ್ಟಿಗೆ ಸೇರಿದೆ.




ಅಚ್ಚರಿಗೊಳಿಸುತ್ತಿರುವ ಹಿಮ ಶಿಖರಗಳ ಪದತಲದಲ್ಲಿ ಈ ಹೂವುಗಳ ಕಣಿವೆಯು ನೆಲೆಗೊಂಡಿದೆ. ಹತ್ತು ಕಿಲೋಮೀಟರು ಉದ್ದ ಮತ್ತು ಹನ್ನೆರಡು ಕಿಲೋಮಿಟರು ಅಗಲದ ಈ ಹೂವಿನ ರತ್ನಗಂಬಳಿಯು ದೇವತೆಗಳ ವಾಸಸ್ಥಾನ ಎಂದು ನಂಬಲಾಗುತ್ತದೆ. ಮಳೆಗಾಲದಲ್ಲಿ ಇಡೀ ಕಣಿವೆಯು ಅಸಂಖ್ಯಾತ ಆಲ್‌ಪೈನ್ ಹೂವುಗಳ ವೈವಿಧ್ಯತೆಯಿಂದ ತುಂಬಿದ ನಿಸರ್ಗದತ್ತ ಉದ್ಯಾನವನವಾಗಿ ಕಂಗೊಳಿಸುತ್ತದೆ. ಸಮುದ್ರಮಟ್ಟದಿಂದ ಸುಮಾರು ೩೫೦೦ ರಿಂದ ೪೦೦೦ ಮೀಟರು ಎತ್ತರದಲ್ಲಿರುವ ಈ ಕಣಿವೆಯಲ್ಲಿ ಹಿಮ ಸರೋವರಗಳು ಮತ್ತು ನೀರ್ಗಲ್ಲ ನದಿಗಳಿವೆ. ಇವುಗಳನ್ನು ಈಗ ರಾಷ್ಟ್ರೀಯ ಉದ್ಯಾನಗಳೆಂದು ಸಂರಕ್ಷಿಸಲಾಗಿದೆ. ಶಂಖದ ಆಕಾರವಿರುವ ಈ ಕಣಿವೆಯ ನಡುವೆ ಪುಷ್ಪವತಿ ಎಂಬ ನದಿ ಹರಿಯುತ್ತದೆ. ತನ್ನೊಡಲಿನಲ್ಲಿ ಸಾವಿರಾರು ಬಗೆಯ ಹೂವುಗಳನ್ನು ಬಚ್ಚಿಟ್ಟುಕೊಂಡಿರುವ ಈ ಸುಂದರ ಕಣಿವೆಯ ಚೆಲುವು ಅಸೀಮವಾದುದು. ಉತ್ತರದಲ್ಲಿ ಕಾಮೆಟ್ ಪರ್ವತ ಮತ್ತು ದಕ್ಷಿಣದಲ್ಲಿ ನಂದಾದೇವಿ ಶಿಖರ – ಇವುಗಳ ನಡುವೆ ೩೬೫೮ ಮೀಟರ್ ಎತ್ತರದ ಈ ಕಣಿವೆಯು ಹಬ್ಬಿದೆ. ಮೇ ಮತ್ತು ಜೂನ್ ತಿಂಗಳ ಆರಂಭದಲ್ಲಿ ಕೆಲವು ಹೂವುಗಳು ಮಾತ್ರ ಇಲ್ಲಿ ಕಾಣಿಸಿಕೊಳ್ಳುತ್ತವೆ. ಜುಲೈ ಮತ್ತು ಆಗಸ್ಟ್‌ನಿಂದ ಆರಂಭಿಸಿ, ಸೆಪ್ಟೆಂಬರ್ ತಿಂಗಳ ಮಧ್ಯಭಾಗದ ವರೆಗೆ ಇಲ್ಲಿ ಮಳೆ ಬರುತ್ತದೆ. ಆಗ ಇಲ್ಲಿ ಕಾಣಬರುವ ಹೂವುಗಳ ವರ್ಣವೈವಿಧ್ಯವು ಎಂಥವರನ್ನೂ ಹುಚ್ಚೆಬ್ಬಿಸುತ್ತದೆ.

ಇಲ್ಲಿನ ಐ.ಟಿ.ಬಿ.ಪಿ. ಸಿಬ್ಬಂದಿಯವರು ಯಾತ್ರಿಗಳನ್ನು ಸ್ವಾಗತಿಸುತ್ತಾರೆ; ಚೀನಾ ಗಡಿಯ ತನಕ ಅವರ ಜೊತೆ ಇರುತ್ತಾರೆ. ಗುಂಜಿಯನ್ನು ಸಮೀಪಿಸುತ್ತಿರುವಂತೆಯೇ ಒಂದು ಕಡೆ ಅನ್ನಪೂರ್ಣ ಪರ್ವತಶ್ರೇಣಿ, ಮತ್ತೊಂದು ಕಡೆ ಆ ಪರ್ವತಗಳಿಗೆ ಮೇಲುಹೊದಿಕೆಯಂತಿರುವ ಹಸಿರು ಹುಲ್ಲು ಹಾಸು – ಈ ಅಪೂರ್ವ ಸುಂದರ ದೃಶ್ಯವನ್ನು ನಾವು ದಾರಿಯುದ್ದಕ್ಕೂ ಕಾಣಬಹುದು.

**ಗುಂಜಿ ಕ್ಯಾಂಪ್:** ನದಿಯನ್ನು ದಾಟಿದ ಬಳಿಕ, ಯಾತ್ರಿಕರು ಕಣಿವೆಯಲ್ಲಿರುವ ಗುಂಜಿ ಕ್ಯಾಂಪನ್ನು ತಲಪುತ್ತಾರೆ. ಪ್ರಯಾಣದ ಕೊನೆಯ ಹಳ್ಳಿ ಇದು. ಕಲಾತ್ಮಕವಾದ ಮನೆಗಳಿರುವ ಈ ಪುಟ್ಟ ಹಳ್ಳಿಯಲ್ಲಿ ಎರಡು ದಿನಗಳ ಕ್ಯಾಂಪ್. ಇಲ್ಲಿ ಯಾತ್ರಿಕರಿಗೆ ಕೊನೆಯ ವೈದ್ಯಕೀಯ ತಪಾಸಣೆ ನಡೆಯುತ್ತದೆ. ಇಲ್ಲಿ ವೈದ್ಯರ ಪರವಾನಗಿ ಪಡೆದವರಿಗೆ ಮಾತ್ರ ಯಾತ್ರೆಯನ್ನು ಮುಂದುವರಿಸಲು ಅವಕಾಶ. ಇದಾದ ನಂತರ ಯಾತ್ರೆಯ ಬಗ್ಗೆ ಕೊನೆಯ ಘಟ್ಟದ ಸಲಹೆ ಸೂಚನೆಗಳನ್ನು ಯಾತ್ರಿಗಳು ಪಡೆದುಕೊಳ್ಳುತ್ತಾರೆ.

ಹಿಮದಿಂದ ಆವೃತವಾದ ಅನ್ನಪೂರ್ಣ ಪರ್ವತದ ಸಾಲು ಇಲ್ಲಿ ಇನ್ನೂ ನೋಡಲು ಲಭ್ಯವಿದೆ. ಹೋಲಿಸಲು ಅಸಾಧ್ಯವಾದಷ್ಟು ಘನೀಕೃತವಾದ ಬೃಹತ್ ಮಂಜುಗಡ್ಡೆಯ ರಾಶಿಗಳಿಂದ ಆವೃತವಾಗಿ ಮೊನಚಾಗಿರುವ ಈ ಶಿಖರಗಳಲ್ಲಿ ಶಿವನನ್ನು ಕುರಿತಾದ ಮಂತ್ರಗಳು ಕೂಡ ಸಾಕಾರಗೊಂಡಿವೆಯೇನೋ ಎಂದೆನಿಸುತ್ತದೆ. ಯಾತ್ರಿಗಳಿಗೆ ಇಲ್ಲಿ ನಿಸರ್ಗದ ದಿವ್ಯ ಭವ್ಯ ಸ್ವಾಗತ ಕಾದಿದೆ. ಶಿವನ ಆಕಾರದ ಒಂದು ಬೆಟ್ಟ ಇಲ್ಲಿ ಮೈದಳೆದಿದೆ. ಪ್ರಕೃತಿದತ್ತವಾಗಿ ನಿರ್ಮಾಣಗೊಂಡಿರುವ ಭಗವಂತನ ದೇಹಾಕಾರವನ್ನು ಹೋಲುವ ಬಂಡೆ ಇದು. ಈ ಪವಿತ್ರ ದೃಶ್ಯದಿಂದ ಪುನೀತರಾಗುವ ಯಾತ್ರಿಗಳಿಗೆ ಕುಮಾವು ಮಂಡಲ್ ವಿಕಾಸ ನಿಗಮವು ಮಾಡಿರುವ ವ್ಯವಸ್ಥೆಗಳ ಬಗ್ಗೆ ಪರಿಚಯ ದೊರಕುತ್ತದೆ. ಸಂಜೆ ಭಜನೆ, ಆರತಿ ನಡೆಯುತ್ತವೆ. ಸೇನೆಯ ಯೋಧರೂ ಇದರಲ್ಲಿ ಭಾಗವಹಿಸುತ್ತಾರೆ. ಸ್ವಾಮಿಗಳೊಬ್ಬರು ಪಾರಾಯಣ ಮಾಡಿದ 'ಆದಿತ್ಯಹೃದಯ' ಸ್ತೋತ್ರವನ್ನು ಕೇಳುತ್ತಾ ಯಾತ್ರಿಗಳು ಅನ್ನಪೂರ್ಣ ಶಿಖರದಲ್ಲಿ ಸೂರ್ಯೋದಯವನ್ನು ವೀಕ್ಷಿಸುತ್ತಾರೆ. **'ಹರಹರ ಮಹಾದೇವ', 'ಓಂ ನಮಃ ಶಿವಾಯ'** ಘೋಷದೊಂದಿಗೆ ಅಲ್ಲಿಂದ ತಮ್ಮ ಮುಂದಿನ ನೆಲೆಯಾದ ಕಾಲಾಪಾನಿಗೆ ಹೊರಡುತ್ತಾರೆ.

**ಕಾಲಾಪಾನಿ:** ಯಾತ್ರಿಗಳು ಕಾಲಾಪಾನಿಯನ್ನು ತಲುಪುತ್ತಾರೆ. ಇಲ್ಲಿರುವ ದೇವಳದಿಂದ ಧುಮ್ಮಿಕ್ಕುವ ನೀರಿನ ನೋಟವೇ ಆಹ್ಲಾದಕರ. ಕಾಳಿ ನದಿಯ ಮೂಲ ಸ್ಥಾನ ಇದು. ಈ



ಓಂ ಪರ್ವತ

ನದಿಯನ್ನು 'ಕಾಳಿ ಮಾತೆ' ಎಂದು ಕರೆದು ಇಲ್ಲಿ ಪೂಜಿಸುತ್ತಾರೆ. ಪರ್ವತದ ದೊಡ್ಡ ದೊಡ್ಡ ಬಂಡೆಗಳ ಪಕ್ಕದಲ್ಲಿ ಈ ಗುಡಿಯು ನಿರ್ಮಿತವಾಗಿದೆ. ಈ ಗುಡಿಯಿಂದ ವ್ಯಾಸಗುಹೆಯು ಕಾಣಿಸುತ್ತದೆ. ಭಗವಾನ್ ವ್ಯಾಸರು ಈ ಗುಹೆಯಲ್ಲಿದ್ದರಂತೆ. ಈಗ ಅಲ್ಲಿಗೆ ಹೋಗುವುದು ಅಸಾಧ್ಯ. 'ನಾಗದೇವತಾ' ಎಂಬ ನಾಗರಹಾವನ್ನು ಹೋಲುವ ಪರ್ವತವೊಂದರ ನೋಟವನ್ನೂ ಈ ಗುಡಿಯಿಂದ ಕಾಣಬಹುದು. ಪೈನ್, ಭೋಜಪತ್ರ ಮತ್ತು ಸೂಚಿಪರ್ಣ ಮರಗಳಿಂದ ಕೂಡಿದ ದೊಡ್ಡ ದೊಡ್ಡ ಕಾಡುಗಳು ಇಲ್ಲಿವೆ. ದೂರದ ಲಿಪಿಲೇಕ್ ಪಾಸ್‌ನಿಂದ ಈ ನದಿಯು ಹರಿದುಬರುತ್ತಿದೆ. ಆದರೂ ಒಂದು ದೊಡ್ಡ ಬಂಡೆಯ ಕೆಳಗಿನ ಕೊಳವೊಂದನ್ನು ಕಾಳಿ ನದಿಯ ಉಗಮಸ್ಥಾನ ಎಂದು ಇಲ್ಲಿನ ಜನರು ಭಾವಿಸುತ್ತಾರೆ. ವ್ಯಾಸ ಮಹರ್ಷಿಗಳು ಇಲ್ಲಿಗೆ ಬಂದಿದ್ದರೆಂದು ಸೂಚಿಸಲು ಈ ಸ್ಥಳವನ್ನು 'ಬ್ಯಾಂಸ್' ಎನ್ನುತ್ತಾರೆ. ಕಾಲಾಪಾನಿಯಲ್ಲಿ ಬಿಸಿನೀರಿನ ಒಂದು ಬುಗ್ಗೆಯೂ ಇದೆ. ಭಾರತದ ಕಡೆಗಿನ ಕಡೆಯ ಇಮಿಗ್ರೇಷನ್ ತಪಾಸಣೆಗೆ ಯಾತ್ರಿಕರು ಇಲ್ಲಿ ಒಳಗಾಗುತ್ತಾರೆ.

**ಓಂ ಪರ್ವತದ ರಮಣೀಯತೆ:** ಇನ್ನುಮುಂದೆ ಭಾರತದ ಕಡೆಯಿಂದ ಕೊನೆಯ ಕ್ಯಾಂಪ್ ಆದ ನಭಿಡಂಗ್ (ಡ್ಯಾಂಗ್) ಅನ್ನು ಯಾತ್ರಿಕರು ತಲುಪುತ್ತಾರೆ. ಇಲ್ಲಿಂದ ಸಾವಕಾಶವಾಗಿ ಹೆಸರುವಾಸಿಯಾದ ಓಂ ಪರ್ವತದೆಡೆಗೆ ಯಾತ್ರೆ ಮುಂದುವರೆಯುತ್ತದೆ. ಹಿಮಾಲಯದ ಪರ್ವತ ಶಿಖರಗಳಲ್ಲಿ ಓಂ ಪರ್ವತವು ಒಂದು ಪುರಾತನವಾದ ಪವಿತ್ರಶಿಖರ. ಟಿಬೆಟಿನ ಕೈಲಾಸ ಪರ್ವತವನ್ನು ಬಹಳವಾಗಿ ಹೋಲುವ ಈ ಬೆಟ್ಟದ ಮೇಲೆ ಹಿಮವು ಪವಿತ್ರ ಓಂ ಆಕಾರದಲ್ಲಿ ಹರಡಿರುತ್ತದೆ. ಅದು ಸಂಸ್ಕೃತದ 'ॐ' ಪದವನ್ನು ಹೋಲುತ್ತದೆ. ಚಳಿಗಾಲದ ಅಂತ್ಯದಲ್ಲಿ ಹಿಮವು ಕರಗಲು ಆರಂಭಿಸಿದಾಗಲಂತೂ ಈ ದೃಶ್ಯ ಇನ್ನೂ ಸ್ಪಷ್ಟವಾಗಿ ಎದ್ದುಕಾಣುತ್ತದೆ. ಸುಂದರವಾದ 'ಪಾರ್ವತಿ ಸರೋವರ' ಮತ್ತು 'ಜೊಂಗ್‌ಲಿಂಗ್‌ಕಾಂಗ್' ಸರೋವರಗಳೆರಡೂ ಈ ಓಂ ಪರ್ವತದ ಸನಿಹದಲ್ಲೇ ಇವೆ. ಇವು ವರ್ಷದ ಬಹಳಷ್ಟು ಸಮಯದಲ್ಲಿ ಹೆಪ್ಪುಗಟ್ಟಿರುತ್ತವೆ. ಇವೆರಡೂ ಸಹ ಮಾನಸ ಸರೋವರದಂತೆಯೇ ಹಿಂದೂಗಳಿಗೆ ಪವಿತ್ರವಾದ ಸ್ಥಳಗಳು. ಈ ಶಿಖರದ ಎದುರಿಗೇ ಹಿಮದಿಂದ ಆವೃತವಾಗಿರುವ ಮುಹರ್ ಪರ್ವತವು ಸೂರ್ಯನ ಕಿರೀಟದಂತೆ ಶೋಭಿಸುತ್ತದೆ.

'ಓಂ' ಎಂಬ ಮೂಲ ಪದವು ಎಲ್ಲ ಶಬ್ದಗಳ ಅಡಕಗೊಂಡ ರೂಪವಾಗಿದೆ. ಇದನ್ನು 'ಶಬ್ದಬ್ರಹ್ಮ'ವೆಂದೂ ಕರೆಯುತ್ತಾರೆ. ನಮ್ಮ ತತ್ತ್ವಶಾಸ್ತ್ರದಲ್ಲಿ ಪರಮ ಪವಿತ್ರವಾದ ಸಂಗತಿಯೊಡನೆ ಇದನ್ನು ಸಮೀಕರಿಸುತ್ತಾರೆ. ಹೀಗಾಗಿ ಓಂಕಾರವು ಅತ್ಯಂತ ಪಾವನವಾದ ಶಬ್ದ. 'ಓಂ' ಅನ್ನು 'ಪ್ರಣವ' ಎಂದೂ ಕರೆಯುತ್ತಾರೆ. ಇದು 'ಅ', 'ಉ' ಮತ್ತು 'ಮ' ಅಕ್ಷರಗಳ ಸಂಗಮದಿಂದಾಗಿದೆ. ಸೃಷ್ಟಿ, ಸ್ಥಿತಿ ಮತ್ತು ಲಯಗಳನ್ನು ಅವು ಕ್ರಮವಾಗಿ ಸೂಚಿಸುತ್ತವೆ. ಹಾಗೆಯೇ ಅ, ಉ, ಮಗಳು ಸೃಷ್ಟಿ, ಸ್ಥಿತಿ, ಮತ್ತು ಲಯಕ್ಕೆ ಕಾರಣರಾದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರನ್ನೂ ಪ್ರತಿನಿಧಿಸುತ್ತವೆ. ಓಂಕಾರವು ಶುಭಪ್ರದವಾದುದು, ನಮ್ಮೆಲ್ಲ ಕಾರ್ಯಗಳಲ್ಲೂ ಯಶಸ್ಸನ್ನು ತರುವಂಥದ್ದು. ಹೀಗಾಗಿ ನಮ್ಮ ಎಲ್ಲ ಕಾರ್ಯಗಳನ್ನೂ ಮಂತ್ರಗಳನ್ನೂ ಓಂಕಾರದಿಂದಲೇ ಆರಂಭಿಸುತ್ತೇವೆ. ಓಂ ಪರ್ವತದಲ್ಲಿ ಕಾಣಬರುವ ಭಗವಂತನ ವೈಚಿತ್ರ್ಯವನ್ನು ಕಂಡು, ಯಾತ್ರಿಕರೆಲ್ಲರೂ ಮೂಕವಿಸ್ಮಿತರಾಗುತ್ತಾರೆ. ಸಾಕ್ಷಾತ್ ಪರಶಿವನೇ ತನ್ನ ತ್ರಿಶೂಲದಿಂದ ಈ 'ಓಂಕಾರ'ವನ್ನು ಬರೆದಿದ್ದಾನೆಯೋ ಎಂದೆನಿಸುತ್ತದೆ. ಇದು ಅತಿ ವಿಸ್ಮಯಕಾರಕ ನೋಟವೇ ಸರಿ!

**ನಭಿಡಂಗ್:** ನಿಗದಿತ ಸಮಯದಲ್ಲೇ ಇಂಡೋ ಟಿಬೆಟಿಯನ್ ಗಡಿಯನ್ನು ದಾಟಬೇಕಾದುದರಿಂದ ಯಾತ್ರಿಕರೆಲ್ಲರೂ ನಸುಕಿನ ಎರಡು ಗಂಟೆಗೇ ಎಚ್ಚರಗೊಳ್ಳುತ್ತಾರೆ. ಆ ನಿರ್ದಿಷ್ಟ ಜಾಗವನ್ನು ತಲುಪಲು ಸುಮಾರು ಸಮಯ ಹಿಡಿಯುತ್ತದೆ. ನಭಿಡಂಗ್‌ನಿಂದ ಲಿಪು ಲೇಕ್ ಪಾಸನ್ನು ತಲುಪಲು